**ಸಿಂಧನೂರಿನಲ್ಲಿ ಶಿಕ್ಷಕರ ತರಬೇತಿ ಕಟ್ಟಡ ಶಿಥಿಲಗೊಂಡಿರುವುದು.**

2525 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಿಂಧನೂರಿನಲ್ಲಿರುವ ಶಿಕ್ಷಕರ ತರಬೇತಿ ಕಟ್ಟಡ ಶಿಥಿಲಗೊಂಡಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ.*

ಆ) *ಈ ಕಟ್ಟಡಗಳ ದುರಸ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು

ಆ) 1995-96ನೇ ಸಾಲಿನಲ್ಲಿ ಸದರಿ ತರಬೇತಿ ಸಂಸ್ಥೆಯ ರಿಪೇರಿ ಕಾರ್ಯವನ್ನು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಕೈಗೆತ್ತಿಕೊಳ್ಳಲಾಗಿದ್ದು ಈ ಬಗ್ಗೆ ರೂ. 4.00 ಲಕ್ಷ ಅನುದಾನ ಮಂಜೂರಾಗಿದೆ. ರಿಪೇರಿ ಕಾಮಗಾರಿಯನ್ನು ಕಾರ್ಯನಿರ್ವಾಹಕ ಅಭಿಯಂತರರು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ರಾಯಚೂರು ಇವರಿಗೆ ವಹಿಸಲಾಗಿದೆ.

**ಕೆನರಾ ವೃತ್ತದಲ್ಲಿ ಕೆಲಸ ನಿರ್ವಹಿಸುತ್ತಿರುವ ಅರಣ್ಯ ರಕ್ಷಕರಿಗೆ ಪ್ರವಾಸ ಹಾಗೂ ದಿನ ಭತ್ಯ.**

2651 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆನರಾ ವೃತ್ತದಲ್ಲಿ ಕೆಲಸ ನಿರ್ವಹಿಸುತ್ತಿರುವ ಅರಣ್ಯ ರಕ್ಷಕರಿಗೆ ಮತ್ತು ಅರಣ್ಯ ಪಾಲಕರಿಗೆ ಪ್ರವಾಸಭತ್ಯೆ ಹಾಗೂ ದಿನಭತ್ಯೆ ಕೊಡಲು ನಿಯಮಾವಳಿಯಲ್ಲಿ ಅವಕಾಶವಿದೆಯೇ? ಹಾಗಿದ್ದಲ್ಲಿ 1994ನೇ ಸಾಲಿನಿಂದ ಇಲ್ಲಿಯ ತನಕ ಒಟ್ಟು ಎಷ್ಟು ಜನ ಅರಣ್ಯ ರಕ್ಷಕರು ಮತ್ತು ಅರಣ್ಯ ಪಾಲಕರು ಪ್ರವಾಸಭತ್ಯೆ ಹಾಗೂ ದಿನಭತ್ಯೆ ಪಡೆದಿದ್ದಾರೆ?*

ಆ) *ಕೆಲವು ಅರಣ್ಯ ರಕ್ಷಕರು ಹಾಗೂ ಅರಣ್ಯ ಪಾಲಕರಿಗೆ ಪ್ರವಾಸಭತ್ಯೆ ಹಾಗೂ ದಿನಭತ್ಯೆ ನೀಡುವಲ್ಲಿ ವಿಳಂಬವಾಗುತ್ತಿರುವುದು ನಿಜವೇ. ಹಾಗಿದ್ದಲ್ಲಿ ಯಾವಾಗ ಈ ಪ್ರವಾಸಭತ್ಯೆ ಹಾಗೂ ದಿನಭತ್ಯೆಯನ್ನು ಪಾವತಿಸಲಾಗುವುದು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಅವಕಾಶವಿದೆ. 1994ನೇ ಸಾಲಿನಿಂದ ಇಲ್ಲಿಯವರೆಗೆ 65 ಜನ ಅರಣ್ಯ ರಕ್ಷಕರು ಮತ್ತು 255 ಜನ ಅರಣ್ಯ ಪಾಲಕರಿಗೆ ನಿಯಮಾನುಸಾರ ಪ್ರವಾಸ ಭತ್ಯೆ ಹಾಗೂ ದಿನಭತ್ಯೆ ಪಾವತಿಸಲಾಗಿದೆ.

ಆ) ಅರಣ್ಯ ರಕ್ಷಕರು ಮತ್ತು ವನಪಾಲಕರು ವಾರದ ತಮ್ಮ ದಿನಚರಿಗಳನ್ನು ಮುಂದಿನ ವಾರಾಂತ್ಯದೊಳಗೆ ಸಲ್ಲಿಸಬೇಕು. ಈ ದಿನಚರಿಗಳನ್ನು ಒಪ್ಪಿಸಿದ ಅರಣ್ಯ ರಕ್ಷಕರಿಗೆ ಹಾಗೂ ವನಪಾಲಕರಿಗೆ ಆದ್ಯತೆಯ ಮೇಲೆ ಪಾವತಿಸಲಾಗುವುದು.

**ಅರಣ್ಯ ಪಾಲಕರ ನೇಮಕಾತಿ**

2650 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ನೇರನೇಮಕಾತಿಯಾದ ಅರಣ್ಯ ಪಾಲಕರು ಎಷ್ಟು ಮತ್ತು ಬಡ್ತಿ ಮೇಲೆ ಅರಣ್ಯ ಪಾಲಕರಾದವರೆಷ್ಟು. ಬಡ್ತಿ ಮತ್ತು ನೇರ ನೇಮಕಾತಿ ಪಡೆದ ಅರಣ್ಯ ಪಾಲಕರು ಒಂದೇ ಜೇಷ್ಠತಾ ಪಟ್ಟಿಯಲ್ಲಿ ಬರಬೇಕಾದುದು ನ್ಯಾಯ ಸಮ್ಮತವಲ್ಲವೇ?

ಆ) ಬಡ್ತಿ ಮೂಲಕ ಅರಣ್ಯ ಪಾಲಕರಾದವರ ಜೇಷ್ಠತಾ ಪಟ್ಟಿ ಮತ್ತು ನೇರನೇಮಕಾತಿ ಮೂಲಕ ಅರಣ್ಯಪಾಲಕರಾದವರ ಜೇಷ್ಠತಾ ಪಟ್ಟಿ ಪ್ರತ್ಯೇಕವಾಗಿದೆಯೇ?

ಇ) ಜೇಷ್ಠತೆಯಲ್ಲಿ ಹಿರಿಯರಿದ್ದ ಬಡ್ತಿ ಮೂಲಕ ಬಂದ ಅರಣ್ಯ ಪಾಲಕರನ್ನು ಕಡೆಗಣಿಸಿ ಜೇಷ್ಠತೆಯಲ್ಲಿ ಕಿರಿಯರಿದ್ದ ನೇರ ನೇಮಕಾತಿ ಹೊಂದಿದ ಅರಣ್ಯ ಪಾಲಕರಿಗೆ ಬಡ್ತಿ ನೀಡಿರುವುದು ನಿಜವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ನೇರ ನೇಮಕಾತಿಯ ವನಪಾಲಕರು - 237

ಬಡ್ತಿಯ ಮೇಲೆ ವನಪಾಲಕರು - 1768

ಹೌದು

ಆ) ಇಲ್ಲ

ಇ) ವನಪಾಲಕರ ಜೇಷ್ಠತೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಹೊರಡಿಸಲಾದ ಮಾರ್ಗಸೂಚಿಯಂತೆ ನೇರ ನೇಮಕಾತಿ ವನಪಾಲಕರ ಜೇಷ್ಠತೆಯನ್ನು ಸಾಮಾನ್ಯ ಜೇಷ್ಠತಾ ಪಟ್ಟಿಯಲ್ಲಿ ಸಿದ್ದಪಡಿಸಲಾಗಿದೆ. ಅಂತೆಯೇ ಈ ಜೇಷ್ಠತಾ ಪಟ್ಟಿಯನ್ನು ಆಧಾರವಾಗಿಟ್ಟು ಕೊಂಡು ಜೇಷ್ಠತೆಯಲ್ಲಿ ಹಿರಿಯರಾದ ವನಪಾಲಕರಿಗೆ ವಲಯ ಅರಣ್ಯ ಅಧಿಕಾರಿಯಾಗಿ ಬಡ್ತಿ ನೀಡಲಾಗುತ್ತಿದೆ.

**ಸಿರ್ಸಿ, ಯಲ್ಲಾಪುರ, ಅಂಕೋಲದಲ್ಲಿ ನರ್ಸರಿ ಶಾಲೆ ಪ್ರಾರಂಭಿಸಲು ಅನುಮತಿಗೆ ನಕಾರ.**

1244 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರ್ಸರಿ ಶಾಲೆ ಪ್ರಾರಂಭಿಸಲು ಸರ್ಕಾರದ ಸೂತ್ರಗಳೇನು.

ಆ) ಇಂಗ್ಲೀಷ್ ಮಾಧ್ಯಮದ ನರ್ಸರಿ ಶಾಲೆ ತೆರೆಯುವ ಬಗ್ಗೆ ಸರ್ಕಾರದ ಯಾವುದಾದರೂ ನಿಬಂಧನೆಗಳು ಇವೆಯೇ.

ಇ) ಸಿರ್ಸಿ, ಯಲ್ಲಾಪುರ, ಅಂಕೋಲ ತಾಲ್ಲೂಕಿನಲ್ಲಿ ನರ್ಸರಿ ಶಾಲೆ (ಕನ್ನಡ ಇಂಗ್ಲೀಷ್) ತೆರೆಯಲು ಯಾವುದಾದರೂ ಪ್ರಸ್ತಾವನೆ ಬಂದಿದೆಯೇ (ತಾಲೂಕುವಾರು ವಿವರ ನೀಡುವುದು)?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಪೂರ್ವ ಪ್ರಾಥಮಿಕ ಶಿಕ್ಷಣವು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾಯ್ದೆಯ ವ್ಯಾಪ್ತಿಗೆ ಒಳಪಡದಿರುವುದರಿಂದ, 1984-85ನೇ ಸಾಲಿನಿಂದ ಯಾವುದೇ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವುದನ್ನು ಹಾಗೂ ಈ ಶಾಲೆಗಳಿಲ್ಲಿ ಸಿಬ್ಬಂದಿ ನೇಮಕ ಮಾಡುವುದರ ಬಗ್ಗೆ ಅನುಮತಿ ನೀಡುವುದನ್ನು ನಿಲ್ಲಿಸಲಾಗಿದೆ.